ಆದರೂ ಬಂದಿದೆ. ಅವಳಿಗೆ ಅವಳ ಧಾಟಿಯಲ್ಲಿಯೇ ಉತ್ತರವನ್ನು ಕೊಡಬೇಕು ಎಂದುಕೊಂಡವನು 'ಈಗ ಪುರುಸೊತ್ತು ಇಲ್ಲ. ಮಧ್ಯಾಹ್ನ ಮೂರು ಗಂಟೆಗೆ ಮಾತಾಡುವ' ಎಂದವನೇ ಒಳಗೆ ಹೋಗಿ ಡ್ರೆಸ್ ಬದಲಿಸಿ ಪೇಟೆಯ ಕಡೆಗೆ ಹೋದ. ಕೆಲಸ ಕಾರ್ಯಗಳು ಇತ್ತು ಅಂತ ಅಲ್ಲ. ಸನ್ನಿವೇಶವು ಹಾಗಿತ್ತು. ಮಧ್ಯಾಹ್ನ ಊಟ ಮಾಡಿ ಮಲಗಿದವನು ಮೂರು ಗಂಟೆಗೆ ಎದ್ದ. ಯಾವತ್ತೂ ತಾನು ಹೀಗೆ ಮಾಡಿದಾಗ ಚಾ ಮಾಡಿ ತಂದು ಕೊಡದ ಕಾತ್ಯಾಯಿನಿ ಬಿಸಿಯಾದ ಚಾ ತಂದಿಟ್ಟು 'ಚಾ ಕುಡೀರಿ' ಅಂದಳು. ಅವಳು ಹಾಗೆ ಹೇಳುವಾಗಲೂ ಅವಳ ಮಾತಿನಲ್ಲಿ ಬೇರೆ ಛಾಯೆ ಇತ್ತು. ಹಾಗೆ ನೋಡಿದರೆ ತಾನು ಮುಂದೆ ಆಡಲಿರುವ ಮಾತುಗಳಿಗೆ ಬೇಕಾದ್ದಷ್ಟು ತಾಲೀಮು ಮಾಡಿಕೊಂಡಿದ್ದಳು. ಹೇಳಿದರೆ ಅದು ರಾಹುಲನ ಕಣ್ಣಿಗೆ ಕಡ್ಡಿ ಚುಚ್ಚಿದಂತೆ ಇರಬೇಕು. ಮೆದು ಮಾತುಗಳಲ್ಲಿ ತಾನು ಹೇಳಲಾರೆ ಎಂದು ಮಧ್ಯಾಹ್ನವೇ ಆಲೋಚನೆಯನ್ನು ಮಾಡಿ ಕೊಂಡಿದ್ದಳು. ಮಾತುಗಳು ಗಣಿತದಂತೆ ಕರಾರುವಕ್ಕಾದ ಒಂದು ಲೆಕ್ಕದಂತೆ ಇರಬೇಕು ಎಂದೇ ಭಾವಿಸಿಕೊಂಡಿದ್ದಳು. ಚಾ ಕುಡಿದ ರಾಹುಲ ಲೋಟವನ್ನು ಕೆಳಗಿಟ್ಟ. ಲುಂಗಿಯಲ್ಲಿ ಬಾಯೊರೆಸಿಕೊಂಡ. ಚಾವಡಿಯ ನೆಲದ ಮೂಲೆಯಲ್ಲಿ ಕುಳಿತ ಕಾತ್ಯಾಯಿನಿ 'ಈಗಲಾದರೂ ನಿಮಗೆ ನನ್ನ ಮಾತು ಕೇಳುವ ಪುರಸೊತ್ತು ಇದೆಯಾ?' ಎಂದಳು. ರಾಹುಲ 'ಸರಿ' ಎಂದ. ಇನ್ನು ಕಾದರೆ ತನ್ನ ಮಾತುಗಳು ತನ್ನ ಗಂಟಲಲ್ಲಿ ಉಳಿಯಬಹುದು ಎಂದು ಅನಿಸಿತು ಕಾತ್ಯಾಯಿನಿಗೆ. ಒಂದೇ ಉಸಿರಲ್ಲಿ 'ನನ್ನ ಕಾಲೇಜಿನ ಲೆಕ್ಚರರ್ ನಂದೀಶನ್ ನನ್ನನ್ನು ಪ್ರೀತಿಸುತ್ತಿದ್ದಾರಂತೆ. ಅವರಿಗೆ ನನ್ನನ್ನು ಬಿಟ್ಟು ಇರಲು ಸಾಧ್ಯವೇ ಇಲ್ಲವಂತೆ. ಏನು ಮಾಡಲಿ?' ಯಾವ ಪೀಠಿಕೆಯೂ ಇಲ್ಲದೆ, ಕಣ್ಣಿಗೆ ಕಡ್ಡಿ ಚುಚ್ಚುವಂತೆ ಹೇಳಬೇಕೆಂದುಕೊಂಡವಳು ಕೊನೆಗೂ ಒಂದು ಪ್ರಶ್ನೆಯಲ್ಲಿ ಮುಗಿಸಿದಳು- ಅದೂ ರಾಹುಲನ ಕಣ್ಣುಗ್ಗಳನ್ನು ನೋಡುತ್ತಾ. ಕಟ್ಟಾ ಸಂಪ್ರದಾಯಸ್ಥ ಜೋಯಿಸರ ಮಗಳು ಕಾತ್ಯಾಯಿನಿ ಈಗ ರಾಹುಲನ ಮಾತಿಗೆ ಕಾದಳು. ರಾಹುಲ ತನಗೆ ಎದುರಾದ ಸನ್ನಿವೇಶಕ್ಕೆ ಹೇಗೆ ಉತ್ತರಿಸುವುದು ಎಂದು ಗೊತ್ತಾಗದೆ ಕ್ಷಣಕಾಲ ಮೌನಿಯಾದ. ಅವನ ಮೌನಕ್ಕೆ ಅರ್ಥವಿತ್ತು. ಮೌನ ಒಮ್ಮೊಮ್ಮೆ ಸಾವಿರ ಮಾತುಗಳನ್ನು ಅಡಗಿಸಿ ಇಡುತ್ತವೆ ಎನ್ನುವುದು ಅವನಿಗೆ ಗೊತ್ತು. ಅದನ್ನು ಅವನು ಜೀವನದಲ್ಲಿ ಕಲಿತಿದ್ದಾನೆ. ಒಂದು ಅಸಹನೀಯ ಕ್ಷಣಗಳನ್ನು ದಂಪತಿಗಳು ಎದುರಿಸಿದರು. ಮತ್ತೆ ಕಾತ್ಯಾಯಿನಿಯೇ ಹೇಳಿದಳು 'ನಿಮ್ಮತ್ರವೇ ಕೇಳುವುದು– ಏನು ಮಾಡಲಿ? ನಿಮ್ಮ ಗಂಡಸರ ಬುದ್ಧಿ ಬಿಟ್ಟು ಯೋಚನೆ ಮಾಡಿ ಹೇಳಿ' ಕುಳಿತವಳು ಎದ್ದು ಕಿಟಕಿಯ ಬಳಿಗೆ ಬಂದು ತನ್ನ ದೃಷ್ಟಿಯನ್ನು ಹೊರಗೆ ಬೀರಿದಳು. ಅಂಗಳದ ಮರವನ್ನು ನೋಡುವುದು ಅವಳಿಗೆ ಇಷ್ಟ. ಅದ್ಯಾಕೋ ಗೊತ್ತಿಲ್ಲ ರಾಹುಲ, 'ಕಾತ್ಯಾಯಿನಿ ಕುಳಿತುಕೋ' ಎಂದು ಹೇಳಿದನಾದರೂ ಅವನ ಸ್ವರದಲ್ಲಿ ಒಂದು ಅಯಾಚಿತವಾದ ನಿರ್ಲಿಪ್ತತೆಯು ಕಾಣಿಸಿತು. ಮತ್ತೆ ಕಾತ್ಯಾಯಿನಿ ಕುಳಿತಳು. ಈಗ ಅವಳ ದೃಷ್ಟಿಯು ಅವನ ಮೇಲೆ ಇರಲಿಲ್ಲ. ನೆಲವನ್ನು ನೋಡುತ್ತಿತ್ತು. ಸೀರೆಯ ಸೆರಗನ್ನು ಮತ್ತೆ ಉದ್ದೇಶಪೂರ್ವಕ ಸರಿ ಮಾಡಿಕೊಂಡಳು. ರಾಹುಲ ಒಂದೇ ಮಾತಿನಲ್ಲಿ ಹೇಳಿದ 'ಅದು ನಿನ್ನ ಇಷ್ಟ. ನನ್ನತ್ರ ಕೇಳಬೇಕಾದ್ದು ಏನೂ ಇಲ್ಲ'. ಈ ಕ್ಷಣಕ್ಕೆ ನೀನು ಉದಾತ್ತನಾದೆ ರಾಹುಲ ಎಂದು ಅವನು ಭಾವಿಸಿಕೊಂಡ. ಕಾತ್ಯಾಯಿನಿ ಅಳುವಿನಲ್ಲಿಯೇ ಹೇಳಿದಳು 'ನನಗೆ ಇದು ಮೊದಲೇ ಗೊತ್ತಿತ್ತು. ನಿಮಗೆ ನನ್ನ ಮೇಲೆ ಪ್ರೀತಿಯಿಲ್ಲ. ನಿಮಗೆ ಬೇಕಾದ್ದು ಅದು ಮಾತ್ರ' ರಾಹುಲನಿಗೆ ಈ ಮಾತು ನಾಟಿತು. 'ನಿನ್ನ ಈ ಎರಡು ಮಾತಲ್ಲಿಯೇ ನನ್ನ ಜೀವನದ ಅರ್ಥವಿರುವುದು ಸಾಧ್ಯವಿಲ್ಲ. ನೀನು ಎರಡು ಮಾತಲ್ಲಿ ಸುಲಭವಾಗಿ

